

# ಕೊರೊನಾ ವೈರಸ್

## ಧೃತಿಗೆಡದಿರಿ; ಮುನ್ನೆಚ್ಚರಿಕೆ ವಹಿಸಿ

ಚೀನಾ ಈಗ ಕೊರೊನಾ ವೈರಸ್‌ನಿಂದಾಗಿ ಸುದ್ದಿಯಲ್ಲಿದೆ. ಮದ್ದೇ ಇಲ್ಲ ಎನ್ನಲಾಗುವ ಈ ಸೋಂಕು ಹಲವು ಜನರನ್ನು ಬಲಿ ತೆಗೆದುಕೊಂಡಿದ್ದಲ್ಲದೆ ಅತ್ಯಂತ ವೇಗವಾಗಿ ಹರಡುತ್ತಲೂ ಇದೆ. ಸುದ್ದಿ ಕೇಳಿಯೇ ಭಾರತದಲ್ಲೂ ಜನ ಧೃತಿಗೆಡುತ್ತಿದ್ದಾರೆ. ಈ ವೈರಸ್ ಹರಡುವುದು ಹೇಗೆ? ಯಾವ ರೋಗ ಲಕ್ಷಣಗಳಿರುತ್ತವೆ? ಮುನ್ನೆಚ್ಚರಿಕೆ ಏನು? ಇತ್ಯಾದಿ ವಿಷಯಗಳ ಕುರಿತ ಸಮಗ್ರ ಮಾಹಿತಿ ಇಲ್ಲಿದೆ.

■ ಡಾ. ವಿನಯ ಶ್ರೀನಿವಾಸ್

ವಿಶ್ವದೆಲ್ಲೆಡೆ ಇದೀಗ ವೈದ್ಯಕೀಯ ಲೋಕದಲ್ಲೇ ತಲ್ಲಣ ಹುಟ್ಟಿಸಿರುವ ಸಂಗತಿ ಕೊರೊನಾ ವೈರಾಣುವಿನ ಸೋಂಕು. ಡಿಸೆಂಬರ್ ತಿಂಗಳ ಮಧ್ಯಭಾಗದಲ್ಲಿ ಚೀನಾದ ವುಹಾನ್‌ನಲ್ಲಿ ಪ್ರಪಥಮ ಬಾರಿಗೆ ಕಾಣಿಸಿಕೊಂಡ ಕೊರೊನಾ ವೈರಾಣುವಿನ ಸೋಂಕು ಇಲ್ಲಿಯವರೆಗೆ ಆ ದೇಶವೊಂದರಲ್ಲೇ ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನರನ್ನು ಭಾದಿಸಿದೆ. ನಾಲ್ಕು ನೂರಕ್ಕೂ ಹೆಚ್ಚು ಜನರು ಈ ಸೋಂಕಿನಿಂದ ಸಾವಿಗೀಡಾಗಿದ್ದಾರೆ. ಚೀನಾದಿಂದ ವಿವಿಧ ಕಾರಣಗಳಿಗಾಗಿ ಇತರ ದೇಶಗಳಿಗೆ ಪ್ರಯಾಣಿಸಿದ ಕೆಲವು ಪ್ರಯಾಣಿಕರಲ್ಲಿಯೂ ಈ ವೈರಾಣು ಪತ್ತೆಯಾಗಿದ್ದು ಇದೀಗ ವಿಶ್ವದೆಲ್ಲೆಡೆ ಆತಂಕವನ್ನು ಹೆಚ್ಚಿಸಿದೆ. ನಮ್ಮ ನೆರೆಯ ಕೇರಳದಲ್ಲೂ ಈ ಸೋಂಕು ಶಂಕಿತ ವ್ಯಕ್ತಿಯ ಪತ್ತೆಯಾಗಿದ್ದು ನಮ್ಮಲ್ಲೂ ಜನರು ಧೃತಿಗೆಡುವಂತೆ ಮಾಡಿದೆ.

ಭಾರತವೂ ಸೇರಿದಂತೆ ಈಗಾಗಲೇ ಜಪಾನ್, ಥೈವಾನ್, ಥೈಲ್ಯಾಂಡ್, ಫ್ರಾನ್ಸ್, ನೇಪಾಳ, ಕೆನಡಾ ಮೊದಲಾದ ದೇಶಗಳಲ್ಲಿ ಈ ವೈರಾಣುವನ್ನು ಪತ್ತೆ ಮಾಡಲಾಗಿದೆ. ಶ್ವಾಸಕೋಶಗಳ ಸೋಂಕನ್ನು ಉಂಟು ಮಾಡುವ ಈ ವೈರಾಣು ಅತಿ ವೇಗದಲ್ಲಿ ಸಹಸ್ರಾರು ಜನರನ್ನು ತಲುಪುವ ಸಾಧ್ಯತೆ ಇರುವುದರಿಂದ ಹಾಗೂ ಈಗಾಗಲೇ ಅನೇಕ ದೇಶಗಳಲ್ಲಿ ವೈರಾಣು ಪತ್ತೆಯಾಗಿರುವುದರ ಹಿನ್ನೆಲೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಕೊರೊನಾ ಪ್ರಕರಣವನ್ನು ಜಾಗತಿಕ ತುರ್ತು ಪರಿಸ್ಥಿತಿ ಎಂದು ಘೋಷಿಸಿದೆ. ಕೊರೊನಾ ನಿಯಂತ್ರಣಕ್ಕೆ ಬೇಕಾದ ಅವಶ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ವಿವಿಧ ದೇಶಗಳಿಗೆ ಕರೆ ನೀಡಿದೆ.